


ಎಡದಿಂದ ಬಲಕ್ಕೆ :

1. ಅಂದವನ್ನು ವಿಪರೀತ ಹೆಚ್ಚಿಸಲು ಹೋಗಿ ಎಲ್ಲ ಹದಗೆಟ್ಟಿತು (3)
3. ಮೂರ್ಖರ ಸಹವಾಸದಲ್ಲಿದ್ದಾನೆ ಅವನ ಪುತ್ರ (3)
4. ಒತ್ತುವರಿ ಮಾಡಲು ಅವಕಾಶ ಬೇಕೆಂದು ತುಂಬ ಒತ್ತಾಯ (3)
6. ಆವತ್ತಿನಿಂದಲೇ ಆತನ ಸ್ಥಿತಿಯಲ್ಲಿ ಭಾರೀ ಕುಸಿತ (4)
7. ಹೊಸದೇನೂ ಕಾಣಲಿಲ್ಲ; ಬರೀ " ದೊಡ್ಡ ದುಡ್ಡು ಚಿಕ್ಕ ದುಡ್ಡು" (4)
9. ತಾವರೆ ಹೂವಿನ ಬಣ್ಣ, ಗಾತ್ರಗಳಲ್ಲೂ ವಿಧ ವಿಧ ಇದೆ (4)
11. ಅಭ್ಯುದಯವನ್ನು ಸಾಧಿಸಿದವರಿಗೆ ಹೊಸದೊಂದು ಹೆಸರು (4)
15. ಅಮೂಲ್ಯ ಜರತಾರಿಗಳನ್ನು ಸಂಗ್ರಹಿಸಲು ಒಂದು ಅಭೇದ್ಯ ಪೆಟ್ಟಿಗೆ (3)
16. ಒಲ್ಲೆಸುವವರಿಗೆಲ್ಲ ಉಡುಗೊರೆ ಎಂಥ ಸುಂದರ ಬಳ್ಳಿ ! (3)
17. ಮಾಲೆ ತೊಡಿಸುವ ಸಮಯದಲ್ಲಿ ಎಷ್ಟು ಮೆತ್ತಗಿನ ಧ್ವನಿ (3)

ಮೇಲಿಂದ ಕೆಳಕ್ಕೆ :

1. ಅವಸರವೇನೇ ಇರಲಿ, ಮೊದಲು ರಾಜನನ್ನು ಹುಡುಕು (3)
2. ವರ್ಣನೆಯ ಅಗತ್ಯವೇ ಇಲ್ಲ, ಇದೊಂದು ಪ್ರಸಿದ್ಧ ಸಿರಿಧಾನ್ಯ (3)
3. ತುಂಬ ಕಲಿತವನಲ್ಲ, ಆದರೆ ಉನ್ನತ ಮನೆತನದವನು (3)
4. ತಳವೇ ಕಾಣದಂಥ ಹಳ್ಳ, ನೋಡಿದೊಡನೆ ಎಂಥ ಭಯ ! (3)
6. ಆತನ ಮೇಲಿರುವ ಸದ್ಭಾವನೆಗಳಿಗೆ ಮಿತಿಯೇ ಇಲ್ಲ (3)
8. ಸಾಮಾನ್ಯ ಮಟ್ಟದ ಬದುಕಿನಲ್ಲೇ ಆಕೆಗೆ ಸದಾ ಸಂತೋಷ, ಹಿಗ್ಗು! (3)
10. ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ ನೋಡಿ, ವಾಸದ ಕಟ್ಟಡ (3)
12. ಬೇಕರಿ ವ್ಯಾಪಾರದಲ್ಲಿ ಎಲ್ಲವೂ ನಷ್ಟವಾಗಿ ಭಿಕ್ಷುಕನಾದ (3)
13. ಗುರಿ ಮುಟ್ಟಿ ಬಂದದ್ದೇ ಆತನ ಹೆಚ್ಚುಗಾರಿಕೆ (3)
14. ಕೇಳುವವರಿಲ್ಲ, ಇದು ದೋಸೆ ಮಾಡುವ ಹೆಂಚು (3)

## 12-04-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅನುಮಾನ 3. ಸಾಮಾನು 4. ಮಿನುಗು 6.ಜಬರಿಸು 7. ಬಲಾಬಲ 9. ಕನಿಕರ 11. ರಸಾತಲ 13. ತರುವಾಯ 15. ಕಾರಾಗೃಹ 17. ಲಡಾಯಿ 18. ಜಾಗರ (=ಎಚ್ಚರ) 19. ಸುಮಧುರ

ಮೇಲಿಂದ ಕೆಳಕ್ಕೆ :

1. ಅನುಜ ; 2. ನಮಿಸು ; 3. ಸಾಹೇಬ ; 5. ಗುಮಾನಿ ; 7. ಬಡಿವಾರ ; 8. ಲಗ್ನಕಾಲ ; 9. ಕಲಾವಂತ ; 10. ರಸಮಯ ; 12. ತತ್ಫಲ ; 14. ರುಧಿರ ; 15. ಕಾಯಿಸು ; 16. ಹಜಾರ



# 'ಸೀಲಕಾಂತ್': ಏನು ವಿಶೇಷ?

ಸೀಲಕಾಂತ್' ಅದೊಂದು ಮೀನು. ಗ್ರೀಕ್ ಭಾಷೆಯಲ್ಲಿ ಸೀಲಕಾಂತ್ ಎಂದರೆ 'ಟೊಳ್ಳು ಬೆನ್ನುಮೂಳೆ' ಎಂದರ್ಥ. ಈ ಲಕ್ಷಣವೇ ಈ ಮತ್ಸ್ಯದ ಪ್ರಥಮ ವೈಶಿಷ್ಟ್ಯ. ಸೀಲಕಾಂತ್ ನ ಬೆನ್ನುಮೂಳೆ ಅದರ ಶರೀರದ ಹಿಂಬದಿಯ ಈಜುರೆಕ್ಕೆಯ ತುದಿಯವರೆಗೂ ಟೊಳ್ಳಾದ ಕೊಳವೆಯಂತೆ ಹಬ್ಬಿದ್ದು ಅದರೊಳಗೆ ವಿಶೇಷ 'ತೈಲ' ತುಂಬಿದೆ. ಹಾಗೆಂದರೆ, ಇತರ ಎಲ್ಲ ಕಶೇರುಕಗಳಂತೆ ಈ ಮೀನು ಬೆನ್ನು ಹುರಿಯನ್ನು ಹೊಂದಿಲ್ಲ ಎಂಬುದು ಸ್ಪಷ್ಟ ತಾನೇ ?

ಎರಡನೆಯ ವಿಶೇಷ ಏನೆಂದರೆ, ಇಸವಿ 1938 ರ ವರೆಗೂ ಸೀಲಕಾಂತ್ 'ಅಳಿದುಹೋದ ಮತ್ಸ್ಯ' ಎಂದೇ ಪಟ್ಟಿಗೊಂಡಿತ್ತು. ಏಕೆಂದರೆ, ಈಗ್ಗೆ ಅರವತ್ತು ದಶಲಕ್ಷ ವರ್ಷಗಳಿಂದೀಚಿನ ಪಳೆಯುಳಿಕೆ ರೂಪಗಳಲ್ಲಾಗಲೀ, ಜೀವಂತವಾಗಿಯಾಗಲೀ ಆ ವರೆಗೂ ಒಂದೇ ಒಂದು ಸೀಲಕಾಂತ್ ಕೂಡ ಪತ್ತೆಯಾಗಿರಲಿಲ್ಲ ! ಇಸವಿ 1938 ಮತ್ತು ಅಲ್ಲಿಂದ ಈಚೆಗೆ ಆಫ್ರಿಕದ ಪೂರ್ವ ಭಾಗದ ಕಡಲಿನ "ಕೊಮೋರೊ ದ್ವೀಪ"ಗಳ ಸನಿಹದಲ್ಲಿ ಮತ್ತು ಇಂಡೋನೇಷಿಯಾದ 'ಸುಲವೇಸಿ'ಯ ಆಸುಪಾಸಿನಲ್ಲಿ ಮೀನುಗಾರ ಹಡಗುಗಳ ಬಲೆಗಳಿಗೆ ಸೀಲಕಾಂತ್ ಗಳು ಅಪರೂಪವಾಗಿ ಲಭಿಸುತ್ತ ಬಂದಿವೆ. ಪ್ರಸ್ತುತ ಸೀಲಕಾಂತ್ ಗಳ ಎರಡೇ ಎರಡು ಪ್ರಭೇದಗಳು ಉಳಿದಿವೆ. ಲಾಟಿಮೇರಿಯಾ ಚೆಲುಮ್ನೇ ಮತ್ತು ಲಾಟಿಮೇರಿಯಾ ಮೆನಡೊಯೆನ್ಸಿಸ್ ( ಚಿತ್ರ 1 ಮತ್ತು 2 ನೋಡಿ ). ಅದೂ ಅತ್ಯಲ್ಪ ಸಂಖ್ಯೆಯಲ್ಲಿ ಮಾತ್ರ. ಹಾಗೆಲ್ಲ ಆಗಿರುವುದರಿಂದಲೇ ಸೀಲಕಾಂತ್ 'ಜೀವಂತ ಪಳೆಯುಳಿಕೆ' ಎಂದೂ ಪ್ರಸಿದ್ಧವಾಗಿದೆ.




ವಾಸ್ತವವಾಗಿ ಸೀಲಕಾಂತ್ ದೊಡ್ಡ ಗಾತ್ರದ ಮೀನು. ಈ ಮತ್ಸ್ಯಗಳು ಆರೂವರೆ ಅಡಿ ಉದ್ದಕ್ಕೆ ಬೆಳೆಯುತ್ತವೆ ; ತೊಂಬತ್ತು ಕಿಲೋ ತೂಕ ತಲುಪುತ್ತವೆ ; ಸರಾಸರಿ ಅರವತ್ತು ವರ್ಷ ಬದುಕುತ್ತವೆ ; ಎರಡುಮೂರು ಸಾವಿರ ಅಡಿ ಆಳದ ಕಡಲ ತಳದ ಗುಹೆಗಳಲ್ಲಿ ಹಗಲನ್ನೆಲ್ಲ ಕಳೆದು ಇರುಳಿನಲ್ಲಿ ಬೇಟೆಗೆ ಹೊರಡುತ್ತವೆ. ಚಿಕ್ಕ ಮತ್ಸ್ಯಗಳು ಮತ್ತು ಮೃದ್ವಂಗಿಗಳೇ ಸೀಲಕಾಂತ್ ಗಳ ಪ್ರಮುಖ ಆಹಾರ. ಸೀಲಕಾಂತ್ ಗೆ 'ಚತುಷ್ಪಾದಿ'ಗಳಂತೆ ನಾಲ್ಕು ಕಾಲುಗಳಿವೆ ( ಚಿತ್ರಗಳಲ್ಲಿ ಗಮನಿಸಿ); ಚತುಷ್ಪಾದಿಗಳು ನೆಲದ ಮೇಲೆ ನಡೆದಾಡುವ ಕ್ರಮದಲ್ಲೇ ಸೀಲಕಾಂತ್ ಕಡಲಲ್ಲಿ ಈಜುತ್ತದೆ.

ಕಡಲಲ್ಲಿ ಸೀಲಕಾಂತ್ ಗಳಿಗೆ ವೈರಿಗಳು ಅತ್ಯಂತ ಅಪರೂಪ ; ಮನುಷ್ಯರಿಗೂ ಇವು 'ಆಹಾರ ಮೀನು'ಗಳಲ್ಲ. ಏಕೆಂದರೆ, ಈ ಮತ್ಸ್ಯಗಳ ಶರೀರದಿಂದ ಸದಾ ಜಿನುಗುವ ಲೋಳೆರಸ ಮತ್ತು ಅವುಗಳ ಮಾಂಸ ಖಂಡಗಳಲ್ಲಿ ಬೆರೆತ ಧಾರಾಳ ತೈಲ, ಯೂರಿಯಾ ಮತ್ತಿತರ ದ್ರವ್ಯಗಳಿಂದಾಗಿ ಅವುಗಳದು ಬಹು ಕೆಟ್ಟ ವಾಸನೆ ಮತ್ತು ಅಷ್ಟೇ ಕೆಟ್ಟ ರುಚಿ. ಮೀನುಗಾರ ಹಡಗುಗಳು ಆಳ ಕಡಲಲ್ಲಿ ಹಾಸಿ ಸೋಸುವ ಬಹು ವಿಸ್ತಾರ ಬಲೆಗಳಿಗೆ ಆಕಸ್ಮಿಕವಾಗಿ 'ಬೇಡವಾದ ಬೇಟೆ'ಯಾಗಿ ಅವು ಸಿಕ್ಕಿಬೀಳುತ್ತವೆ. ಹಾಗಿದ್ದೂ ಅವು ಅತ್ಯಲ್ಪ ಸಂಖ್ಯೆಯಲ್ಲಷ್ಟೇ ಇದ್ದು ಅಳಿದುಹೋಗುವ ಹಂತ ತಲುಪಿವೆ.

■ ಎನ್. ವಾಸುದೇವ್